'ನೂರು ರೂಪಾಯಿ ಕೊಡುತ್ತೇನೆಂದವರು, ನಾನು ನಿಜಕ್ಕೂ ಸ್ಮಶಾನಕ್ಕೆ ಹೋಗುವೆನೋ ಇಲ್ಲವೋ ತಿಳಿದುಕೊಳ್ಳಲು ಮೂವರೂ ನನ್ನ ಹಿಂದೇ ಬರುತ್ತಾರೆಂದು ಗೊತ್ತಿತ್ತು!' ಎಂದನು ರಂಗ.

★★★

ಈ ಕಥೆಯ ಹಿಂದೆಯೇ ನೆನಪಾದದ್ದು ಮಂಕುತಿಮ್ಮನ ಕಗ್ಗದ ಪದ್ಯ:

ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ ।
ನಂಬಿಯುಂ ನಂಬದಿರುವಿಬ್ಬಂದಿ ನೀನು ॥
ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು ।
ಸಿಂಬಳದಿ ನೊಣ ನೀನು – ಮಂಕುತಿಮ್ಮ ॥

ನಂಬಿಕೆಯ ಶಕ್ತಿಯನ್ನು ಕುರಿತು ಮೇಲಣ ಕಥೆಯೂ ಪದ್ಯವೂ ಹೇಳುತ್ತಿದೆ.

ಜೀವನದಲ್ಲಿ ನಂಬಿಕೆಯೊಂದಿದ್ದರೆ ಏನನ್ನೂ ಸಾಧಿಸಲಾದೀತು; ನಂಬಿಕೆಯನ್ನು ಕಳೆದುಕೊಂಡರೆ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಅಭದ್ರತೆಯೇ ಕಾಡುತ್ತದೆ.

ಜೀವನ ಎಂದರೆ ಕತ್ತಲು. ಅದನ್ನು ಕಂಡರೆ ಎಲ್ಲರಿಗೂ ಭಯ. ಸ್ಮಶಾನ ಎಂದರೆ ಇನ್ನೂ ಭಯ; ಸಾವಿಗೆ ಅಂಜದಿರುವವರು ಯಾರಿದ್ದಾರು? ಇನ್ನು ಕತ್ತಲೆಯಲ್ಲಿ ಸ್ಮಶಾನಕ್ಕೆ ಹೋಗುವುದು ಎಂದರೆ? ಭಯವೋ ಭಯ! ಜೀವನದಲ್ಲಿ ಕತ್ತಲೂ ಸಾವೂ – ಎರಡೂ ಅನಿವಾರ್ಯ. ಬೆಳಕು ಇದ್ದ ಮೇಲೆ ಕತ್ತಲು ಇರಲೇಬೇಕು; ಹುಟ್ಟು ಇದ್ದಮೇಲೆ ಸಾವು ಕೂಡ ಇರಬೇಕಷ್ಟೆ.

ಕತ್ತಲನ್ನು ಎದುರಿಸಲೇಬೇಕು. ರಾತ್ರಿ ಎಂದರೆ ಕತ್ತಲು ತಾನೆ? ಕತ್ತಲೆಗೆ ಹೆದರಿ ಜೀವನವನ್ನು ಮುಂದುವರೆಸದಿದ್ದರೆ ಹೇಗೆ? ಕತ್ತಲೆಯಲ್ಲೂ ಬದುಕಿನ ಹೆಜ್ಜೆಯನ್ನು ಇಡಲೇಬೇಕು. ಆದರೆ ಅದಕ್ಕೊಂದು 'ಆಮಿಷ' ಬೇಕೇನೋ? ಈ ಆಮಿಷವನ್ನೇ ಗುರಿ ಎಂದೂ ಕರೆಯಬಹುದು ಎನಿಸುತ್ತದೆ. ಸ್ಮಶಾನಕ್ಕೆ ಕತ್ತಲೆಯಲ್ಲಿ ಹೋಗಲು ರಂಗನಿಗೆ ಪಂಥದ ಆಹ್ವಾನ ಧೈರ್ಯ ಕೊಟ್ಟಿತಲ್ಲವೆ? ಹೀಗೆಯೇ ನಮಗೂ ಕೂಡ ಜೀವನದಲ್ಲಿ ಕೆಲವು ಆಹ್ವಾನಗಳು ಇಲ್ಲದೆಹೋದಾಗ ಧೈರ್ಯವೇ ಮೂಡದು; ಮಾತ್ರವಲ್ಲ, ಜೀವನಕ್ಕೆ ಸೌಂದರ್ಯವೂ ಒದಗದು.

ಬಾಲ್ಯದಲ್ಲಿ ಅಂಕಗಳ ಆಮಿಷ ನಮ್ಮನ್ನು ಓದಿನ ಕಡೆಗೆ ಪ್ರಚೋದಿಸುತ್ತದೆ; ತಾರುಣ್ಯದಲ್ಲಿ ಹಣದ ಆಮಿಷ ನಮ್ಮನ್ನು ಉದ್ಯೋಗದ ಕಡೆಗೆ ಪ್ರಚೋದಿಸುತ್ತದೆ; ಪ್ರೌಢಾವಸ್ಥೆಯಲ್ಲಿ ಮನೆ–ಕುಟುಂಬಗಳ ಹೊಣೆಗಾರಿಕೆ ನಮ್ಮನ್ನು ಕ್ರಿಯಾಶೀಲತೆಗೆ ಪ್ರಚೋದಿಸುತ್ತದೆ. ಹೀಗೆ ಜೀವನದ ಉದ್ದಕ್ಕೂ ಒಂದಲ್ಲ ಒಂದು ಪಂಥವನ್ನು ಆಹ್ವಾನಿಸಿಕೊಳ್ಳದ ಹೊರತು ಜೀವನದ ನಡೆ ಸರಾಗವಾಗಿ ಸಾಗದು. ಇವೆಲ್ಲವೂ ರಂಗನ ಪಂಥಾಹ್ವಾನದಂತೆ. ಆದರೆ ಈ ಪಂಥಕ್ಕೂ ಮೀರಿದ ಶಕ್ತಿಯೊಂದು ಈ ಎಲ್ಲ ವಿದ್ಯಮಾನಗಳ ಬೆನ್ನೆಲುಬಾಗಿರುತ್ತದೆ. ವಾಸ್ತವದಲ್ಲಿ ಅದೇ ನಮ್ಮನ್ನು ಮುನ್ನಡೆಸುತ್ತಿರುತ್ತದೆ.

ನಮ್ಮ ಬಾಲ್ಯವನ್ನೇ ನೋಡೋಣ. ಅಂಕಗಳ ಆಮಿಷವನ್ನೇ ಹೆತ್ತವರು ನಮಗೆ ಒಡ್ಡಿರಬಹುದು. ಆದರೆ ನಮಗೆ ಅಂಕಗಳು ಕಡಿಮೆ ಬಂದಿದೆ ಎಂದು ನಮ್ಮನ್ನು ಅವರು ತಿರಸ್ಕರಿಸುವುದಿಲ್ಲವಷ್ಟೆ! ಈ ನಂಬಿಕೆ ಮೇಲೆ ಮಕ್ಕಳು ಓದುವುದು ಕೂಡ. ಅಂಕಗಳು ಕಡಿಮೆ ಬಂದರೆ ನಮಗೆ ಉಳಿಗಾಲವಿಲ್ಲ ಎಂದು ಮಕ್ಕಳು ಭಾವಿಸಿದರೆ, ಆಗ ಹುಟ್ಟುವ ಭಯದಿಂದ